**ಓ.ಎಸ್. ಸಂಖ್ಯೆಃ 203 /2015**

**ಪಿ.ಡಬ್ಲ್ಯೂಃ 3**

ದಿನಾಂಕಃ 12.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ**

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ದಾವಾ ಆಸ್ತಿಯನ್ನು ನಾನು ನೋಡಿದ್ದೇನೆ. ಈ ದಾವೆಯನ್ನು ಯಾರ ಯಾರ ಮೇಲೆ ಸಲ್ಲಿಸಿದ್ದಾರೆ ಗೊತ್ತು. ಈ ದಾವೆಯನ್ನು ಸರ್ವೆ ನಂಬರ್ 24 ರಲ್ಲಿ 3 ಎಕರೆ ಚಿಲ್ಲರೆ ಹೊಲದ ವಿಚಾರವಾಗಿ ಸಲ್ಲಿಸಿದ್ದಾರೆ. ಇದರ ಚೆಕ್ಕು ಬಂದಿ ಪೂರ್ವಕ್ಕೆಃ- ಜಂಬಣ್ಣರವರ ಜಮೀನು, ಪಶ್ಚಿಮಕ್ಕೆಃ ಗುಡ್ಡ ಮತ್ತು ನಮ್ಮ ಜಮೀನು, ಉತ್ತರಕ್ಕೆಃ ಜಂಬಣ್ಣ ರವರ ಜಮೀನು, ದಕ್ಷಿಣಕ್ಕೆಃ ಹಳ್ಳ ಮತ್ತು ಚನ್ನಮ್ಮ ರವರ ಜಮೀನು ಇರುತ್ತದೆ. ದಾವಾ ಆಸ್ತಿಯ ಪಹಣಿ ಪತ್ರಗಳನ್ನು ನಾನು ನೋಡಿರುವುದಿಲ್ಲ.

ಸುಮಾರು 25-30 ವರ್ಷಗಳಿಂದ ದಾವಾ ಆಸ್ತಿಯ ಪಹಣಿ ಪತ್ರಿಕೆಗಳು 1 ನೇ ಪ್ರತಿವಾದಿಯ ಹೆಸರಿಗೆ ಇರುವ ವಿಚಾರ ಗೊತ್ತಿಲ್ಲ. 1 ನೇ ಪ್ರತಿವಾದಿಯು ಮುರುಸಾಣಿ ಮಾರಯ್ಯ, ಮುರುಸಾಣಿ ಪಕೀರಯ್ಯ ಮತ್ತು ಮುರುಸಾಣಿ ಮಲ್ಲಯ್ಯರವರ ವಿರುದ್ಧ ದಾವಾ ಸಂಖ್ಯೆ 104/2015 ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆ 1 ನೇ ಪ್ರತಿವಾದಿ ಪರವಾಗಿ ಡಿಕ್ರಿ ಆದ ವಿಚಾರ ಗೊತ್ತಿಲ್ಲ. ದಾವಾ ಆಸ್ತಿಯು ಸುಮಾರು 40 ವರ್ಷಗಳಿಂದ 1 ನೇ ಪ್ರತಿವಾದಿಯ ಗಂಡ ಪಂಪಣ್ಣ, ನಂತರ 1 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿಯಲ್ಲ.

ವಾದಿ ಅಥವಾ ಆಕೆಯ ತಂದೆ ಯಾವ ಕಾಲಕ್ಕೂ ದಾವಾ ಆಸ್ತಿಯ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಹೊಲದ ಸರ್ವೆ ನಂಬರ್ 616. ಅದರ ಪಹಣಿ ಪತ್ರಿಕೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಪ್ರತಿವಾದಿಯರು ಯಾವ ದಿನದಂದು ವಾದಿಗೆ ತೊಂದರೆ ಕೊಟ್ಟರು ಎಂದರೆ ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ವಾದಿ, 1 ನೇ ಪ್ರತಿವಾದಿ ಮತ್ತು ನಾನು ಇದ್ದೇವು. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ಸ್ವಾಧೀನದಲ್ಲಿರುವುದರಿಂದ ಆಕೆ ವಾದಿಗೆ ತೊಂದರೆ ಕೊಡುವ ಪ್ರಸಂಗ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಿ.ಡಬ್ಲ್ಯೂಃ 3**

**ಮರು-ವಿಚಾರಣೆ ಇಲ್ಲ.**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**